ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್

## ನಿರ್ಮಲ ಭಾರತ್ ಅಭಿಯಾನ

ಸಂಖ್ಯೆ : ಗ್ರಾಅಪ/ರಾನೀನೈಮಿ/ನಿಭಾಅ/66/2013-14 ದಿನಾಂಕ 14.02.2014

**ಮಂಜೂರಾತಿ ಆದೇಶ**

**ವಿಷಯ:** ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆಗಾಗಿ 2 ಗ್ರಾಮ ಪಂಚಾಯ್ತಿಗಳಿಗೆ ಮಂಜೂರಾತಿ ನೀಡುತ್ತಿರುವ ಬಗ್ಗೆ.

**ಉಲ್ಲೇಖ:** ನಿರ್ಮಲ ಭಾರತ್ ಅಭಿಯಾನದ ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ದಿನಾಂಕ 01.04.2013ರ ಕನ್ನಡ ಸುತ್ತೋಲೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಜಿಲ್ಲೆಯಿಂದ 2 ಗ್ರಾಮ ಪಂಚಾಯ್ತಿಗಳಿಗೆ ಪ್ರಸ್ತಾವನೆಯನ್ನು ಕಳುಹಿಸಿದ್ದು, ಈ ಕೆಳಗಿನಂತೆ ಅನುಮೋದನೆ ನೀಡಿ ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ.

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮ ಪಂಚಾಯತಿ | ಎನ್‌ಬಿಎ ಅಡಿಯಲ್ಲಿ ಅನುಮೋದನೆಯಾದ ಮೊತ್ತ (ರೂ.ಲಕ್ಷಗಳಲ್ಲಿ) | ಎನ್‌ಬಿಎ ಅಡಿಯಲ್ಲಿ ಅನುಷ್ಠಾನಗೊಳಿಸಲು ಅನುಮೋದನೆಯಾದ ಚಟುವಟಿಕೆಗಳು | ಚಟುವಟಿಕೆವಾರು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|---|---|
| 1 | **ಮೈಸೂರು** | ಕೆ.ಆರ್. ನಗರ | ಚಂದಗಾಲ | 14.63 | 1. ಘಟಕ ನಿರ್ಮಾಣ -1 | 9.00 |
| | | | | | 2. ಆಪೆ ವಾಹನ -1 | 2.89 |
| | | | | | 3. ಲೇಬರ್ ಚಾರ್ಜ್ - 3 | 1.80 |
| | | | | | 4. ಒಎಸ್ ದ್ರಾವಣ | 0.64 |
| | | | | | 5. ಇನ್ಸಿನಿರೇಟರ್ -1 | 0.30 |
| | | | | | | **14.63** |
| 2 | **ಮೈಸೂರು** | ಟಿ. ನರಸಿಪುರ | ಅತ್ತಹಳ್ಳಿ | 14.67 | 1. ಘಟಕ ನಿರ್ಮಾಣ -1 | 9.00 |
| | | | | | 2. ಇನ್ಸಿನಿರೇಟರ್ -1 | 0.30 |
| | | | | | 3. ಆಪೆ ವಾಹನ -1 | 2.89 |
| | | | | | 4. ಲೇಬರ್+ಡ್ರೈವರ್ -3 | 1.88 |
| | | | | | 5. ಒಎಸ್ ದ್ರಾವಣ | 0.60 |
| | | | | | | **14.67** |
| | | | **ಒಟ್ಟು ಮೊತ್ತ** | | | **29.30** |

ಮೇಲ್ಕಾಣಿಸಿದ ನಿಬಂಧಿನೆಗಳನ್ವಯ ಘಟಕವಾರು ಕಾಮಗಾರಿಗಳನ್ನು ಪೂರ್ಣಗೊಳಿಸಿ ಫೋಟೋ ದಾಖಲಾತಿಯೊಂದಿಗೆ ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್‌ಗೆ ವರದಿಯನ್ನು ಸಲ್ಲಿಸುವುದು.

**ನಿಬಂಧನೆಗಳು:-**

1. ಜಿಲ್ಲೆಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಘನ ಮತ್ತು ದ್ರವತ್ಯಾಜ್ಯ ನಿರ್ವಹಣಾ ಕಾಮಗಾರಿಯ ಸಂಪೂರ್ಣ ಉಸ್ತುವಾರಿಯು ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರದಾಗಿರುತ್ತದೆ.
2. ಕೆ.ಟಿ.ಪಿ.ಪಿ ಕಾಯ್ದೆಯ ನಿಯಾಮಾನುಸಾರವಾಗಿಯೇ ಅನುಷ್ಠಾನಗೊಳಿಸಬೇಕು
3. ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆಯ ಪ್ರಗತಿ ಪರಿಶೀಲನೆಯನ್ನು ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ ಮತ್ತು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ತಿಂಗಳಿಗೊಮ್ಮೆ ಪರಿಶೀಲಿಸಿ, ಪ್ರಗತಿ ವರದಿಯನ್ನು ರಾಜ್ಯ ಕಛೇರಿಗೆ ಸಲ್ಲಿಸಬೇಕು.

4. ಎಲ್ಲಾ ಸಾಮಾಗ್ರಿಗಳು ಗುಣಮಟ್ಟದಲ್ಲಿರುವುದನ್ನು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಮುಖ್ಯ ಇಂಜಿನಿಯರ್‌ರವರು ಖಾತ್ರಿ ಪಡಿಸಬೇಕು.
5. ಸ್ಥಳೀಯ ಬೇಡಿಕೆಗಳಿಗೆ ಅನುಗುಣವಾಗಿರುವಂತೆ ಪ್ರೋಕ್ಯೂರ್‌ಮೆಂಟ್ ಮಾಡಬೇಕು.
6. ವರ್ಷದ ಎಲ್ಲಾ ದಿನವು ಘಟಕವು ಚಾಲನೆಯಲ್ಲಿದ್ದು, ಸ್ಥಗಿತಗೊಳ್ಳದಂತೆ ಸಂಪೂರ್ಣ ಉಪಯೋಗವಾಗಬೇಕು.
7. ಘಟಕ ಪ್ರಾರಂಭಕ್ಕೂ ಮೊದಲೇ ನಿಗದಿತ ಜಾಗವು ಗ್ರಾಮ ಪಂಚಾಯ್ತಿಗೆ ಹಸ್ತಾಂತರವಾಗಿರಬೇಕು. ಇದರ ನಕಲನ್ನು ರಾಜ್ಯ ಕಛೇರಿಗೆ ಸಲ್ಲಿಸಬೇಕು. ನಂತರವೇ ಅನುಮೋದನೆ ಎಂದು ಪರಿಗಣಿಸುವುದು.
8. ಘನ ಮತ್ತು ದ್ರವತ್ಯಾಜ್ಯ ನಿರ್ವಹಣಾ ಕಾಮಗಾರಿ ಅಡಿಯಲ್ಲಿ ನಿರ್ಮಾಣಗೊಂಡ ಯಾವುದೇ ನಿರ್ಮಾಣಗಳು ಅಥವಾ ಚಟುವಟಿಕೆಗಳು ಬದಲಿ ವಿನಿಯೋಗಕ್ಕೆ ಅವಕಾಶವಿರುವುದಿಲ್ಲ.
9. ಪ್ರತೀ ಗ್ರಾಮ ಪಂಚಾಯ್ತಿಯಲ್ಲೂ ಘನ ಮತ್ತು ದ್ರವತ್ಯಾಜ್ಯ ನಿರ್ವಹಣಾ ಕಾಮಗಾರಿ ಬಗ್ಗೆ ವಿವರವಾದ ಪ್ರತ್ಯೇಕ ದಾಖಲಾತಿಗಳಿರಬೇಕು.
10. ಮೇಲ್ಕಂಡ 38ಗ್ರಾಮ ಪಂಚಾಯ್ತಿಗಳ ಪೈಕಿ ಈಗಾಗಲೇ ಎನ್.ಜಿ.ಪಿ ಪಡೆದ ಗ್ರಾಮಪಂಚಾಯಿತಿಗಳಲ್ಲಿ ಸುಸ್ಥಿರತೆಯನ್ನು ನಿರ್ವಹಿಸುವುದು ಹಾಗೂ ಉಳಿದ ಗ್ರಾಮ ಪಂಚಾಯಿತಿಗಳನ್ನು 2014-15 ಸಾಲಿನಲ್ಲಿ ನಿರ್ಮಲ ಗ್ರಾಮ ಪುರಸ್ಕಾರಕ್ಕೆ (NGP) ಕಡ್ಡಾಯವಾಗಿ ಅಣಿಗೊಳಿಸಬೇಕು.
11. ಘನ ಮತ್ತು ದ್ರವತ್ಯಾಜ್ಯ ನಿರ್ವಹಣಾ ಕಾಮಗಾರಿಗಾಗಿ ನಿಗದಿಪಡಿಸಿದ ಮೊತ್ತವನ್ನು ಬೇರೆ ಕಾಮಗಾರಿಗಳಿಗೆ ಬಳಸಿಕೊಳ್ಳುವಂತಿಲ್ಲ.

**ಮಿಷನ್ ನಿರ್ದೇಶಕರು,**
ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್,
ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

<u>ರವರಿಗೆ:</u>

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್,
ಮೈಸೂರು.

ಪ್ರತಿಯನ್ನು :-

1. ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು ಇವರ ಮಾಹಿತಿಗಾಗಿ.

15/2

2ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕಾವೇರಿಭವನ, ಬೆಂಗಳೂರು - 560 009.
ದೂರವಾಣಿ ಸಂ.22221861/62 : - ಫ್ಯಾಕ್ಸ್ :-22221862 E-mail : wsrdpr@gmail.com